doc-542
TP-2

Reg No B G 155 9 — 9 —72

55th Year of Publication ‘Satyavadi’ daily, Mysore 4

In State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅತಿಥಿ ನಿಯಂತ್ರಣ ಆಜ್ಞೆ ಜಾರಿ ಬಗೆಗೆ ಕೇಂದ್ರದ ಸೂಚನೆ

ಹರಿಜನ ವಿದ್ಯಾರ್ಥಿನಿಯ ಸಾವು

ನವದೆಹಲಿ— ಕಸ್ತೂರಿಬಾ ನಿಕೇತನ ವಿದ್ಯಾಲಯದ 17 ವರ್ಷದ ಪ್ರೇಮಲತಾ ಎಂಬ ಹರಿಜನ ವಿದ್ಯಾರ್ಥಿನಿಯ ಶವವು ಆ ಸ್ಕೂಲಿನ ಛಾವಣಿಯಲ್ಲಿ ಸಿಕ್ಕಿ, ಆ ದನ್ನು 1000 ಮಂದಿ ಪೌರವಣಿಗೆಯಲ್ಲಿ ಪ್ರಧಾನಿಯವರ, ಸ್ಟೇಟ್ ಗೃಹ ಮಂತ್ರಿಯವರು ವಿದ್ಯಾಮಂತ್ರಿಯವರ ಮುಂದೆ ಪ್ರದರ್ಶಿಸಿ ಸಾವಿನ ಬಗ್ಗೆ ನ್ಯಾಯಾಂಗ ವಿಚಾರಣೆ ಕೇಳಿಕೆ ಹಾಕಿದರು – ಸ್ಕೂಲಿನ ಸವರ್ಣ ಹಿಂದೂ ಪ್ರಿನ್ಸಿಪಲ್ ಆದ ಮಹಿಳೆಯು ಆ ಹುಡುಗಿಗೆ ಗೋಕುಲಸ್ಥಮಿಯಂದು ಪ್ರಸಾದ ಕೊಡಲು ನಿರಾಕರಿಸಿದರೆನ್ನಲಾಗಿದೆ – ಪ್ರಿನ್ಸಿಪಾಲ್ ಮೇಲೆ ಅಸ್ಪೃಶತಾ ವಿರುದ್ಧ ಕಾನೂನಿನಂತೆ ಕೇಸ್ ರಿಜಿಸ್ಟರು ಮಾಡಿಕೊಳ್ಳಲಾಗಿದೆ

●

ರೈಲಿನಲ್ಲಿಯ 2 ನೇ ತರಗತಿ

ನವದೆಹಲಿ— ದೇಶದ ರೈಲ್ವೆಗಳ ಎಲ್ಲಾ ಪ್ರಮುಖ ಮಾರ್ಗಗಳಲ್ಲಿ 2 ನೇ ತರಗತಿಯನ್ನು ತೆಗೆದುಹಾಕಲು ರೈಲ್ವೇ ಸಚಿವಾಲಯವು ನಿರ್ಧರಿಸಿದೆ.

★

ರೈಲ್ವೇ ತಕ್ಸೀರುಗಳಿಂದ ನಷ್ಟ

ನವದೆಹಲಿ — ಜೂನ್ ತಿಂಗಳಲ್ಲಿ ರೈಲುಗಳಲ್ಲಾದ ತಕ್ಸೀರುಗಳಿಂದ 164728 ರೂ ಗಳು ನಷ್ಟವುಂಟಾಗಿದೆ.

★

ಅಭಿಮಾನ

ಮಂಡ್ಯ— ಇಲ್ಲಿ ಒಂದು ಮುಸ್ಲಿಂ ಹಾಸ್ಪಲ್ ಕಟ್ಟಿಸುವ ಬಗ್ಗೆ ಸಭೆ ಸೇರಿದಾಗ ಆಲ್ಲೇ ರೂ 74000 ಶೇಖರಿಸಲ್ಪಟ್ಟಿತು.

★

ದಿವ್ಯವಾಣಿ

ಪತ್ನಿಯು ಮನುಷ್ಯನಲ್ಲಿ ಅರ್ಧ.

— ಮಹಾಭಾರತ

ರೈಲು ನಡೆಸಲು ಸೈನ್ಯದವರು

ನವದೆಹಲಿ— ಲೋಕೋ ನೌಕರರ ಮುಷ್ಕರಕ್ಕೆ ಒಳಗಾಗಿರುವ ಮದರಾಸು ಮತ್ತು ಇತರ ದಕ್ಷಿಣ ಕೇಂದ್ರಗಳಿಗೆ ಅವಶ್ಯಕವಾದ ರೈಲುಗಳನ್ನು ನಡೆಸಲು ಪ್ರದೇಶ ಸೈನ್ಯದವರನ್ನು ಕಳುಹಿಸಲಾಗಿರುವದೆಂದು ವರದಿಯಾಗಿದೆ

★

ರೈಲುಗಳ ರದ್ದು

ಮದರಾಸು— ಗುರುವಾರದ ವಾರ್ತೆಯಂತೆ ರದ್ದು ಪಡಿಸಿರುವ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ಸಂಖ್ಯೆ 28 ಕ್ಕೆ ಏರಿದೆ ; ಪ್ರಯಾಣೇಕರ ರೈಲುಗಳು 310 ಕ್ಕೆ ಏರಿದೆ.

★

ವಿದ್ಯಾರ್ಥಿಗಳ ಕಷ್ಟ

ಮೈಸೂರು— ನಗರದಲ್ಲಿ ಹೋಟಲು ಮತ್ತು ಸಿನಿಮಾಗಳ ಹೆಚ್ಚಿನ ದರ, ರೂಂಗಳ ಹೆಚ್ಚಿಗೆ ಬಾಡಿಗೆ ಪ್ರತಿಭಟಿಸಿ ವಿದ್ಯಾರ್ಥಿಗಳು ನಿನ್ನೆಯೂ ಮುಷ್ಕರ ನಡೆಸಿದರು – ಹೋಟಲಿನವರು ತಿಂಡಿ ಬೆಲೆ ತಗ್ಗಿಸಲು ತಾ॥ 12 ರವರೆಗೆ ಕಾಲ ಕೇಳಿಕೊಂಡಿರುವರೆಂದೂ, ರೂಂ ಬಾಡಿಗೆ ತಗ್ಗಿಸುವ ವಿಚಾರದಲ್ಲಿ ರೆಂಟ್ ಕಂಟ್ರೋಲರೂ, ಜಿಲ್ಲಾಧಿಕಾರಿಗಳೂ ತಾ ॥ 12 ರವರೆಗೆ ಕಾಲ ತೆಗೆದುಕೊಂಡಿರುವರೆಂದೂ ಹೇಳಲಾಗಿದೆ.

★

ಲೋಕೋ ನೌಕರರ ಮುಷ್ಕರ

ಮದರಾಸು— ತಮ್ಮ ನ್ಯಾಯವಾದ ಕೇಳಿಕೆ ನೆರವೇರುವವರೆಗೆ ಮುಷ್ಕರ ಮುಂದುವರಿಸಲು ಕ್ರಿಯಾ ಸಮಿತಿ ತೀರ್ಮಾನಿಸಿದೆ.

ಮುಷ್ಕರದಿಂದ ರೈಲ್ವೆಗಳಿಗೆ ದಿನಕ್ಕೆ ರೂ. 25 ಲಕ್ಷ ನಷ್ಟವಾಗುತ್ತಿರುವದೆಂದು ರೈಲ್ವೆ ಜನರಲ್ ಮ್ಯಾನೇಜರ್ ಹೇಳಿದರು

ಮಳೆಗಾಗಿ ಯುವಕನ ಪ್ರಾಣಾರ್ಪಣೆ –

ಸೌರಾಷ್ಟ್ರವನ್ನು ಕ್ಷಾಮದಿಂದ ರಕ್ಷಿಸುವ ಆಶಯದಿಂದ 22 ವರ್ಷದ ದಾವಜಿ ಲಕ್ಷ್ಮಣ್ ತನ್ನ ಅಮೆಪುರ ಗ್ರಾಮದಲ್ಲಿಯ ಶಿವ ದೇವಾಲಯದಲ್ಲಿ ತನ್ನ ಬೆಟ್ಟನ್ನು ಕತ್ತರಿಸಿ ಶಿವ ವಿಗ್ರಹದ ಮೇಲೆ ರಕ್ತ ಚಿಮುಕಿಸಿ ನಂತರ ದೇವಾಲಯದಲ್ಲಿ ನೇಣು ಹಾಕಿಕೊಂಡು ಪ್ರಾಣಾರ್ಪಣೆ ಮಾಡಿದನು. ಕ್ಷಾಮ ತಡೆಯುವಂತೆ ಹತ್ತು ಪುಟಗಳ ಪತ್ರ ಬರೆದು ಶಿವನನ್ನು ಒತ್ತಾಯ ಮಾಡಿರುವನು. ಅನಾವೃಷ್ಟಿ ದೆಸೆಯಿಂದ ಅಲ್ಲಿ ಕ್ಷಾಮ ತಲೆದೋರುತ್ತಿದೆ. ಮಳೆ ದೇವರ ತೃಪ್ತಿಗಾಗಿ ಕೆಲವು ವಾರಗಳಿಂದ ರಾಮಧ್ಯಾನದ ಸಾಮೂಹಿಕ ಹಾಡುಗಾರಿಕೆ ನಡೆಯುತ್ತಿದೆ.

ಬಿಹಾರಿನಲ್ಲಿ ಸೇನೆಗೆ ಕರೆ

ಪಾಟ್ನಾದಿಂದ ಬಂದಿರುವ ವರದಿಯ ಪ್ರಕಾರ ವಿದ್ಯಾರ್ಥಿ ಚಳುವಳಿಯ ಹಿಂಸಾತ್ಮಕ ಬಿಹಾರಿನ ಇತರ ಕಡೆ ಹರಡಿ ಸರ್ಕಾರ ಒಂದು ಬೆಟಾಲಿಯನ್ ಸೇನೆ ಕರೆಸಿಕೊಂಡಿದೆ. ಪೋಲೀಸರ ಸಂಖ್ಯೆ ಹೆಚ್ಚಿಸಿದೆ ರೈಲ್ವೆ ನಿಲ್ದಾಣದ ಮೇಲೆ ಗುಂಪಿನ ದಾಳಿ, ಹಣ ಲೂಟಿ ನಡೆದಿದೆ. ಪೋಲೀಸರು ನಡೆಸಿದ ಕಾರ್ಯಗಳ ಬಗ್ಗೆ ವಿಧಾನ ಸಭೆಯಲ್ಲಿ ಪ್ರತಿಭಟಿಸಲಾಗಿದೆ.

ರಾಜ್ಯಗಳಿಗೆ ಕೇಂದ್ರದ ಸೂಚನೆ

ಸಾಮಾಜಿಕ ಸಮಾರಂಭಗಳಲ್ಲಿ 25 ಮಂದಿ, ವಿವಾಹ ಮತ್ತು ಶವ ಸಂಸ್ಕಾರಗಳಲ್ಲಿ 50 ಮಂದಿಗೆ ಹೆಚ್ಚು ಅತಿಥಿಗಳಿರಬಾರದೆಂಬ ಅತಿಥಿ ಹತೋಟಿ ಆಜ್ಞೆಯನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿರುವದಾಗಿ ನವ ದೆಹಲಿ ವಾರ್ತೆ ತಿಳಿಸುತ್ತದೆ.

ಸುರಂಗ ಮಾರ್ಗಕ್ಕೆ ಹಣ ಮಂಜೂರು

ಸೌದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ಜಾಜೆಕ್ಟಿನ ಎಡದಂಡೆ ನಾಲೆಯಲ್ಲಿ ಸುರಂಗ ಮಾರ್ಗ ನಿರ್ಮಿಸಲು ಮಂತ್ರಿಮಂಡಲ 79 ಲಕ್ಷ ರೂ. ಮಂಜೂರ್ಮಾಡಿರುವುದಾಗಿ ಬೆಂಗಳೂರು ವಾರ್ತೆ ತಿಳಿಸುತ್ತದೆ.

ಚಳುವಳಿ ಮುಂದಕ್ಕೆ ಹೋಯಿತು

ಚಳುವಳಿಯನ್ನು 14 ನೇ ತಾ॥ ವರೆಗೆ ಮುಂದಕ್ಕೆ ಹಾಕಲು ಮೈಸೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿ ನಾಯಕರು ಸಭೆ ಸೇರಿ ನಿರ್ಧರಿಸಿದರು.

ಗ್ರಾಮಾಂತರ ನೀರು ಸರಬರಾಜು ಸ್ಕೀಂ

ಮೈಸೂರು– ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ 17 ಸ್ಕೀಂಗಳನ್ನು ಮೈಸೂರು ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಈ ಆರ್ಥಿಕ ವರ್ಷದಲ್ಲಿ ಜಾರಿಗೆ ತರಲಾಗುವುದೆಂದು ಪತ್ರಿಕೆಯವರಿಗೆ ಪಿ ಹೆಚ್ ಇ ಎಕ್ಸಿಕ್ಯುಟಿವ್ ಇಂಜಿನಿಯರ್ ಶ್ರೀ ಪ್ರಸ್ಟಾದ್‌ರವರು ತಿಳಿಸಿದರು.

★ ಜಲಂಧರಿನಿಂದ ಬಂದಿರುವ ವರದಿಯಂತೆ ಡಿಸೆಂಬರ್ ಯುದ್ಧ ಕಾಲದಿಂದ ಪಾಕಿಸ್ತಾನದ ಸ್ಥಾನಬದ್ಧತೆಯಲ್ಲಿದ್ದ 83 ಭಾರತ ರಾಷ್ಟ್ರೀಯರು ಭಾರತಕ್ಕೆ ವಾಪಸಾದರು

ಮಿತ್ರನಿಗೆ ಪತ್ರ

ನವಪೇಟೆ– 15 ವರ್ಷಗಳ ಕೆಳಗಿನ ಮಕ್ಕಳು " ಮಿತ್ರನಿಗೆ ಪತ್ರ " ವಿಷಯದಲ್ಲಿ ಅಂಚೇತಂತೀ ಇಲಾಖೆ ಏರ್ಪಡಿಸಿದ್ದ ' ಪತ್ರ ಬರೆಯುವ ಸ್ಪರ್ಧೆ " ಯಲ್ಲಿ ಫಿಲಾಂಗಿನ ಮಿನ್ಯಾ ನಿವೇದಿತಾ ಬೊರಾಳು ಅಸ್ಸಾಂ ಭಾಷೆಯಲ್ಲಿ ಬರೆದ ಪತ್ರಕ್ಕೆ ಪ್ರಥಮ ಬಹುಮಾನ ರೂ. 500, ಮದ್ರಾಸಿನ ಗಿರಿಮೇಲಾ ವಸುಮತಿ ತೆಲುಗು ಭಾಷೆಯಲ್ಲಿ ಬರೆದ ಪತ್ರಕ್ಕೆ ಎರಡನೇ ಬಹುಮಾನ ರೂ. 300 ದೊರೆಯಿತು ; ಹಿಂದಿ ಮಲೆಯಾಳಿ ಭಾಷೆಯಲ್ಲಿನ ಎರಡು ಪತ್ರಗಳಿಗೆ ತಲಾ ರೂ. 150 ದೊರೆಯಿತು.

★

ಆಕರ್ಷಣೀಯವಾದ ಆನೆ

ಕಲ್ಲೀಕೋಟೆ— ಈಚೆಗೆ ವೈನಾಡು ಅರಣ್ಯಗಳಲ್ಲಿ ಹಿಡಿಯಲಾದ ಗೋವಿಂದ ಆನೆಯು ಮರಿ ಆಕರ್ಷಣೀಯವಾಗಿದೆ – ಡೆಲ್ಲಿಯಲ್ಲಿ ನಡೆಯುವ ಏಷ್ಯಾ ಮೇಳದಲ್ಲಿ ಒಳ್ಳೇ ಆಕರ್ಷಣೀಯ ಸುಸ್ವಾಗತ ನೀಡುವ ವ್ಯಕ್ತಿಯಾಗಲಿದೆ – ಆದು ಧ್ವಜ ಹಾರಿಸಬಲ್ಲದು ; ಗಣ್ಯರಿಗೆ ಹಾರಹಾಕಿ, ಸ್ವಾಗತಿಸಬಲ್ಲದು ; ಅನೇಕ ರೀತಿಯ ಕಸರತ್ ಆಟ ಆಡಬಲ್ಲದು – ಇದು ನವೆಂಬರ್‌ನಲ್ಲಿ ಡೆಲ್ಲಿಗೆ ಹೋಗಲಿದೆ.

Contribute Liberally
to the National Defence Fund

SHAKTI
SUDHA

A Superb Tonic

ಅಖಿಲಭಾರತದಲಿ ಕೂಡಲೇ



ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ 8 9 72 ರಿಂದ ಅಮೋಘ ಪ್ರಾರಂಭ

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ · ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋಷ್ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10–30 ಕ್ಕೆ ತೀಸ್ರಿ ಮಂಜಿಲ್

ಅಪೆರಾ 2 ನೇ ವಾರ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಆದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಆನೆ – ಹುಡುಗ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore